

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಏಸುಕ್ರಿಸ್ತ ಮತ್ತು ಶ್ರೀಕೃಷ್ಣನ ಬಾಲ್ಯವೃತ್ತಾಂತದ ಸೋಜಿಗ!

ಮನೆಯಲ್ಲಿ ನಿಮ್ಮ ಮಕ್ಕಳಿಗೆ ಬಿಕ್ಕಳಿಕೆ ಬಂದರೆ ಏನು ಮಾಡುತ್ತೀರಿ? ಕೆಲವರು ತಾಯಂದಿರು ನೀರು ಕುಡಿಸಿದರೆ, ಇನ್ನು ಕೆಲವರು ದೀರ್ಘವಾಗಿ ಉಸಿರಾಡಲು ಹೇಳುತ್ತಾರೆ. ಮತ್ತೆ ಕೆಲವರು ಪ್ರಾಣಾಯಾಮ ಮಾಡುವಂತೆ ಮೂಗಿನಲ್ಲಿ ನಿಧಾನವಾಗಿ ಉಸಿರನ್ನು ಎಳೆದುಕೊಂಡು ಬಿಗಿಹಿಡಿದು ಬಿಡು ಎನ್ನುತ್ತಾರೆ. ಆದರೆ ಇದಾವುದೂ ಸರಿಯಾದ ಪರಿಹಾರ ಕ್ರಮವಲ್ಲ. ಒಂದು ದೊಡ್ಡ ಟೀಚಮಚೆಯಷ್ಟು ಸಕ್ಕರೆಯನ್ನು ಕೊಟ್ಟು ಬಾಯಲ್ಲಿ ಚೆನ್ನಾಗಿ ಅಗಿದು ನುಂಗುವಂತೆ ಮಾಡಿದರೆ ಕ್ಷಣಾರ್ಧದಲ್ಲಿ ಬಿಕ್ಕಳಿಕೆ ನಿಲ್ಲುತ್ತದೆ! ಈ ಕುತೂಹಲಕರ ಸಂಗತಿ ನಮಗೆ ತಿಳಿದದ್ದು ವಿಯೆನ್ನಾ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾಗ. ನಮ್ಮ ಹಾಗೆಯೇ ವಿಯೆನ್ನಾದಲ್ಲಿ ಓದಲು ಥೈಲ್ಯಾಂಡಿನಿಂದ ಬಂದಿದ್ದ ಓರಿಗೆಯ ವಿದ್ಯಾರ್ಥಿಯಿಂದ. ಒಂದೇ ವಿದ್ಯಾರ್ಥಿನಿಲಯದಲ್ಲಿ ವಾಸವಾಗಿದ್ದು ಪ್ರಸಂಗವಶಾತ್ ತಿಳಿಯಿತು. ಬಿಕ್ಕಳಿಕೆ ಚಿಕ್ಕ ಮಕ್ಕಳಿಗೆ ಅಷ್ಟೇ ಅಲ್ಲ ದೊಡ್ಡವರಿಗೂ ಬರುತ್ತದೆ. ಇದೇ ಪರಿಹಾರ ಕ್ರಮವನ್ನು ದೊಡ್ಡವರೂ ಅನುಸರಿಸಬಹುದು. ಆದರೆ ದೊಡ್ಡವರಿಗೆ ಬರುವ 'ಬಿಕ್ಕಳಿಕೆ'ಯೇ ಬೇರೆ. ಆಂಗ್ಲಭಾಷೆಯಲ್ಲಿ ಬಿಕ್ಕಳಿಕೆಗೆ hiccups ಎಂದು ಹೇಳುತ್ತಾರೆ. ಕನ್ನಡದ ಬಿಕ್ಕಳಿಕೆಗೆ ಇಲ್ಲದ ಬೇರೊಂದು ಅರ್ಥ ಇಂಗ್ಲೀಷಿನ hiccups ಗೆ ಇದೆ. ಕೈಗೊಂಡ ಯಾವುದೇ ಕೆಲಸ ನಿರಾತಂಕವಾಗಿ ಕೈಗೂಡದೆ ಅಡೆತಡೆಗಳು ಉಂಟಾದ ಸಂದರ್ಭಗಳಲ್ಲಿ "There are some minor hiccups" ಎಂದು ಉದ್ಗರಿಸುವುದನ್ನು ನೀವು ಕೇಳಿರಬಹುದು. ಸಕ್ಕರೆಯು ಬಾಯಲ್ಲಿ ಲಾಲಾರಸದೊಂದಿಗೆ ಬೆರೆತು ಜಠರಕ್ಕೆ ಹೋಗುವಾಗ ಯಾವ ರಾಸಾಯನಿಕ ಕ್ರಿಯೆಯನ್ನು ಶರೀರದೊಳಗೆ ಉಂಟುಮಾಡಿ ಬಿಕ್ಕಳಿಕೆಯನ್ನು ನಿಲ್ಲಿಸುತ್ತದೆ ಎಂಬುದು ವೈದ್ಯಕೀಯ ಸಂಶೋಧನೆಗೆ ಬಿಟ್ಟ ವಿಚಾರ. ಸಾಮಾನ್ಯವಾಗಿ ಬಿಕ್ಕಳಿಕೆ ಬಂದಾಗ ಯಾರೋ ನೆನೆಸುತ್ತಿದ್ದಾರೆಂದು ಹಳ್ಳಿಗಳಲ್ಲಿ ಹೇಳುವುದು ವಾಡಿಕೆಯಲ್ಲಿದೆ. ಈ ನಂಬಿಕೆ ಎಷ್ಟರಮಟ್ಟಿಗೆ ವಾಸ್ತವ ನಂಬುವುದು ಕಷ್ಟ.

ಅದೇನೇ ಇರಲಿ. 32 ವರ್ಷಗಳ ಹಿಂದಿನ ವಿದ್ಯಾರ್ಥಿಜೀವನದ ಕೆಲವಾರು ಘಟನೆಗಳು ನಮಗೆ ನೆನಪಾಗುತ್ತಿರುವುದು ಕ್ರಿಸಮಸ್ ಹಬ್ಬದ ಕಾರಣದಿಂದ. ಕ್ರೈಸ್ತ ಧರ್ಮೀಯರಿಗೆ ಈಗ ಜಗತ್ತಿನೆಲ್ಲೆಡೆ ಕ್ರಿಸ್‌ಮಸ್ ಹಬ್ಬದ ಸಡಗರ. ವಿಶ್ವದ ವಿಭೂತಿಪುರುಷರಲ್ಲೊಬ್ಬನಾದ ಏಸುಕ್ರಿಸ್ತನ ಜನ್ಮದಿನೋತ್ಸವದ ಸಂಭ್ರಮ. ಹಿಂದೂಗಳಿಗೆ ಕೃಷ್ಣಜನ್ಮಾಷ್ಟಮಿಯು ಹೇಗೋ ಹಾಗೆ ಕ್ರೈಸ್ತರಿಗೆ ಕ್ರಿಸ್‌ಮಸ್ ಹಬ್ಬ. ಹಿಂದೂಗಳು ಹಬ್ಬಹರಿದಿನಗಳಂದು ಮಾವಿನ ತೋರಣ ಬಾಳೆಕಂದುಗಳನ್ನು ತಂದು ಮನೆಯ ಒಳಹೊರಗೆ ಅಲಂಕಾರ ಮಾಡುವಂತೆ ಕ್ರೈಸ್ತರು ಕ್ರಿಸ್‌ಮಸ್ ಗಿಡವನ್ನು ಮನೆಯ ಒಳಹೊರಗೆ ಇಟ್ಟು ಅಲಂಕರಿಸುತ್ತಾರೆ. ಅದರ ರೆಂಬೆಕೊಂಬೆಗಳ ಮೇಲೆ ನಕ್ಷತ್ರಗಳು ಕಂಗೊಳಿಸುವಂತೆ ವಿದ್ಯುದ್ದೀಪಾಲಂಕಾರ ಮಾಡುತ್ತಾರೆ. ದೇವರ ಮಗನೆಂದು ಕ್ರೈಸ್ತರು ಆರಾಧಿಸುವ ಏಸುಕ್ರಿಸ್ತನ ಬಾಲ್ಯಜೀವನಕ್ಕೂ ಮತ್ತು ಹಿಂದೂಗಳ ಆರಾಧ್ಯದೇವರಲ್ಲೊಬ್ಬನಾದ ಶ್ರೀಕೃಷ್ಣನ ಬಾಲ್ಯಜೀವನಕ್ಕೂ ಅನೇಕ ಕುತೂಹಲಕಾರಿ ಹೋಲಿಕೆಗಳು ಇರುವುದನ್ನು ಮನಗಾಣಬಹುದಾಗಿದೆ.

ಏಸುಕ್ರಿಸ್ತನ ಲೌಕಿಕ ತಂದೆ-ತಾಯಿ ಜೋಸೆಫ್ ಮತ್ತು ಮೇರಿ. ಜೋಸೆಫ್ ವೃತ್ತಿಯಿಂದ ಸಾಮಾನ್ಯ ಯೆಹೂದಿ ಕುಟುಂಬದ ಒಬ್ಬ ಬಡಗಿ. ಮೇರಿಯನ್ನು ಜೋಸೆಫ್‌ಗೆ ಕೊಟ್ಟು ಮದುವೆ ಮಾಡಬೇಕೆಂದು ನಿಶ್ಚಯಕಾರ್ಯವಾಗಿತ್ತು. ಇಬ್ಬರಿಗೂ ದೇವರಲ್ಲಿ ಅಪಾರ ಶ್ರದ್ಧಾಭಕ್ತಿ ಇತ್ತು. ದೇವದೂತನೊಬ್ಬ ಆಕೆಯ ಕನಸಿನಲ್ಲಿ ಬಂದು ಪವಿತ್ರಾತ್ಮನಾದ ದೇವರು ನಿನ್ನ ಉದರದಲ್ಲಿ ಜನಿಸುತ್ತಾನೆಂದೂ ಅವನಿಗೆ 'ಏಸು' ಎಂದು ನಾಮಕರಣ ಮಾಡಬೇಕೆಂದೂ ಹೇಳುತ್ತಾನೆ. ನೀನು ಕನ್ಯೆಯಾಗಿದ್ದುಕೊಂಡೇ ದೈವಾಂಶಸಂಭೂತನಾದ ಮಗುವಿಗೆ ಜನ್ಮ ನೀಡುತ್ತೀಯಾ ಎಂಬ ದೇವದೂತನ ಮಾತುಗಳಿಂದ ಮೇರಿಗೆ ಗಾಬರಿಯಾಗುತ್ತದೆ. ಇದು ಹೇಗೆ ಸಾಧ್ಯ ಎಂದು ಅಳುಕಿದರೂ ದೇವರ ಇಚ್ಛೆ ಇದ್ದಂತಾಗಲಿ ಎನ್ನುತ್ತಾಳೆ. ಮೇರಿಯು ದೇವರ ಕೃಪೆಯಿಂದ ತಾನು ಗರ್ಭವತಿಯಾಗಿರುವ ವಿಷಯವನ್ನು ಜೋಸೆಫ್‌ಗೆ ತಿಳಿಸುತ್ತಾಳೆ.



ಜೋಸೆಫ್ ಕ್ಷಣಕಾಲ ವಿಚಲಿತನಾಗುತ್ತಾನೆ. ಮೇರಿಯ ಹೊಟ್ಟೆಯಲ್ಲಿ ಉದಯಿಸುತ್ತಿರುವ ಕೂಸು ತನ್ನದಲ್ಲವೆಂದು ತಿಳಿದ ಜೋಸೆಫ್ ಮದುವೆಗೆ ಮುಂಚೆಯೇ ಗರ್ಭವತಿಯಾಗಿದ್ದಾಳೆಂದರೆ ಸಮಾಜ ಏನಂದೀತು ಎಂಬ ಭಯದಿಂದ ಮದುವೆ ನಿಶ್ಚಯಕಾರ್ಯವನ್ನು ಮುರಿಯಬೇಕೆಂದುಕೊಳ್ಳುತ್ತಾನೆ. ದೇವದೂತನು ಆತನ ಕನಸಿನಲ್ಲಿಯೂ ಪ್ರತ್ಯಕ್ಷನಾಗಿ ಎಲ್ಲವನ್ನೂ ವಿವರಿಸಿ ದೈವೇಚ್ಛೆಯಂತೆ ನೀನು ಮೇರಿಯ ಕೈಹಿಡಿಯಬೇಕೆಂದು ಹೇಳುತ್ತಾನೆ. ಕನಸಿನಿಂದ ಎಚ್ಚೆತ್ತ ಜೋಸೆಫ್ ನೈತಿಕವಾಗಿ ಮೇರಿಯ ತಪ್ಪು ಏನೂ ಇಲ್ಲವೆಂಬುದನ್ನು ಮನಗಂಡು ಸಮಾಜ ಆಕೆಯ ಚಾರಿತ್ರ್ಯದ ಮೇಲೆ ಕಳಂಕ ಹೊರಿಸಿ ಕಲ್ಲುಹೊಡೆಯುವಂತಾಗಬಾರದೆಂದು ಮದುವೆಯಾಗುತ್ತಾನೆ. ಚಕ್ರವರ್ತಿಯಾದ Caesar Augustus ತನ್ನ ಸಾಮ್ರಾಜ್ಯದಲ್ಲಿ ಜನಗಣತಿ ಮಾಡಬೇಕಾಗಿರುವುದರಿಂದ ಎಲ್ಲರೂ ಅವರವರ ವಾಸಸ್ಥಳಗಳಿಗೆ ಹಿಂದಿರುಗಬೇಕೆಂದು ಆದೇಶಿಸುತ್ತಾನೆ. ಅದರಂತೆ ಜೋಸೆಫ್ ಮತ್ತು ಮೇರಿ ಬೆತ್ಲೆಹೆಮ್‌ಗೆ ಹಿಂತಿರುಗುವಾಗ ಮಾರ್ಗಮಧ್ಯೆ ಏಸುವಿಗೆ ಜನ್ಮ ನೀಡುತ್ತಾಳೆ. 'ಯೆಹೂದಿಗಳ ರಾಜ' ಹುಟ್ಟಿದ್ದಾನೆಂದು ಅಶರೀರವಾಣಿ ನುಡಿಯುತ್ತದೆ. ಆಗ ಜುಡೆಯಾ (Judea) ಪ್ರಾಂತ್ಯವನ್ನು ಆಳುತ್ತಿದ್ದ ರಾಜನಾದ ಹೆರೋಡ್ (Herod) ತನ್ನ ಗದ್ದುಗೆಗೆ ಸಂಚಕಾರ ಬರುತ್ತದೆಯೆಂದು ಏಸು ಜನಿಸಿದ

ನಕ್ಷತ್ರದಂದು ಹುಟ್ಟಿದ ಎಲ್ಲ ಗಂಡುಕೂಸುಗಳನ್ನೂ ಕೊಲ್ಲಲು ಆದೇಶಿಸುತ್ತಾನೆ. ಅವನ ಈ ಕರಾಳ ಆದೇಶದಿಂದ ರಾಜ್ಯದಲ್ಲಿ ಮಕ್ಕಳ ಬರ್ಬರ ಹತ್ಯೆ ನಡೆಯುತ್ತದೆ. ದೇವರ ಕೃಪೆಯಿಂದ ತನ್ನ ಮಗುವಿನ ಹತ್ಯೆಯಾಗದಂತೆ ಸಂರಕ್ಷಿಸಲು ಜೋಸೆಫ್ ಮಗುವಿನೊಂದಿಗೆ ಪಲಾಯನಗೈಯುತ್ತಾನೆ.

ಇನ್ನು ಶ್ರೀಕೃಷ್ಣನ ವಿಚಾರಕ್ಕೆ ಬಂದರೆ ಇದೇ ತೆರನಾದ ಜನ್ಮವೃತ್ತಾಂತ ಇರುವುದು ಭಾರತೀಯರೆಲ್ಲರಿಗೂ ಗೊತ್ತಿರುವ ಸಂಗತಿ. ಕೃಷ್ಣನ ತಂದೆ-ತಾಯಿ ವಸುದೇವ ಮತ್ತು ದೇವಕಿ. ಕಂಸ ದೇವಕಿಯ ಅಣ್ಣ. ತನ್ನ ತಂದೆಯಾದ ಉಗ್ರಸೇನನನ್ನು ಕಾರಾಗೃಹದಲ್ಲಿರಿಸಿ ತಾನೇ ರಾಜನಾಗುತ್ತಾನೆ. ದೇವಕಿಯ ಉದರದಲ್ಲಿ ಜನಿಸುವ ಎಂಟನೆಯ ಮಗುವಿನ ಕೈಯಲ್ಲಿ ತನ್ನ ಹತ್ಯೆಯಾಗುವುದೆಂದು ಅಶರೀರವಾಣಿ ನುಡಿದುದನ್ನು ಕೇಳಿ ಕಂಸ ಕೋಪೋದ್ರಿಕ್ತನಾಗುತ್ತಾನೆ. ವಸುದೇವ-ದೇವಕಿಯರನ್ನು ಕಾರಾಗೃಹದಲ್ಲಿರಿಸಿ ಅವಳ ಹೊಟ್ಟೆಯಲ್ಲಿ ಹುಟ್ಟುವ ಎಲ್ಲ ಮಕ್ಕಳನ್ನು ಕೊಲ್ಲಿಸುವ ಯತ್ನ ಮಾಡುತ್ತಾನೆ. ಎಂಟನೆಯ ಮಗುವಾಗಿ ಹುಟ್ಟಿದ ಕೃಷ್ಣನನ್ನು ತಂದೆಯಾದ ವಸುದೇವ ಕಾರಾಗೃಹದಿಂದ ಹೊರಗೆ ರಹಸ್ಯವಾಗಿ ನಂದ ಗೋಕುಲಕ್ಕೆ ಸಾಗಿಸಿ ರಕ್ಷಿಸುತ್ತಾನೆ. ಏಸುಕ್ರಿಸ್ತನಾಗಲೀ, ಶ್ರೀಕೃಷ್ಣನಾಗಲೀ ಹುಟ್ಟಿದ್ದು ಮಧ್ಯರಾತ್ರಿಯಲ್ಲಿ. ಕ್ರಿಸ್ತನನ್ನು ಕೊಲ್ಲಲು ದೊರೆಯಾದ ಹೆರೋಡ್ ಯತ್ನಿಸಿದರೆ, ಕೃಷ್ಣನನ್ನು ಕೊಲ್ಲಲು ದೊರೆಯಾದ ಕಂಸ ಯತ್ನಿಸುತ್ತಾನೆ. ಇಬ್ಬರೂ ತಮ್ಮ ತಮ್ಮ ಗದ್ದುಗೆಯನ್ನು ಉಳಿಸಿಕೊಳ್ಳಲು ಎಳೆಯ ಮಕ್ಕಳನ್ನು ಕೊಲ್ಲುವಂತಹ ಹೀನಕೃತ್ಯದಲ್ಲಿ ತೊಡಗುತ್ತಾರೆ. ದೇವರ ಕೃಪೆಯಿಂದ ಕ್ರಿಸ್ತನನ್ನಾಗಲೀ, ಕೃಷ್ಣನನ್ನಾಗಲೀ ಉಳಿಯುವಂತೆ ಸಂರಕ್ಷಣೆ ಮಾಡಿದ್ದು ಅವರವರ ತಂದೆಯರು. ಈ ವಿಷಯವಾಗಿ ಹೆಚ್ಚಿನ ಅಧ್ಯಯನ ಮಾಡ ಬಯಸುವವರು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ನಮ್ಮೊಂದಿಗೆ ಸಂಶೋಧನೆಯಲ್ಲಿ ನಿರತರಾಗಿದ್ದು ಈಗ ಬೃಂದಾವನದಲ್ಲಿ ನೆಲೆಸಿರುವ ಚೈತನ್ಯಸಂಪ್ರದಾಯದ ಶ್ರೀವತ್ಸ ಗೋಸ್ವಾಮಿ ಮತ್ತು ಅಮೇರಿಕಾದ ಹಾನ್ ಸ್ಟ್ರಾಟನ್ ಹೌಲೇ (Hohn Stratton Hawley) ಇವರು ಸಹಭಾಗಿತ್ವದಲ್ಲಿ ಬರೆದಿರುವ *"AT PLAY WITH KRISHNA: Pilgrimage Dramas from Brindavan"* (Princeton: University Press 1981) ಪುಸ್ತಕವನ್ನು ಓದಬಹುದು.

ವಿಯೆನ್ನಾದಲ್ಲಿ ಓದುತ್ತಿದ್ದಾಗ ಎರಡು ಕ್ರಿಸ್‌ಮಸ್ ಹಬ್ಬಗಳನ್ನು ಆತ್ಮೀಯ ಕ್ರೈಸ್ತಕುಟುಂಬವರ್ಗದವರ ಮನೆಗಳಲ್ಲಿ ಮತ್ತು ಚರ್ಚುಗಳಲ್ಲಿ ಕಣ್ಣಾರೆ ನೋಡಿದ ವಿಶೇಷ ಅನುಭವ ನಮ್ಮದು. ನಮ್ಮ ಸಂಶೋಧನೆಗೆ ಮಾರ್ಗದರ್ಶಕರೂ ಮತ್ತು ಸಂಸ್ಕೃತ ಪ್ರಾಧ್ಯಾಪಕರೂ ಆಗಿದ್ದ ಪ್ರೊಫೆಸರ್ ಗೆರ್‌ಹಾರ್ಡ್ ಓಬರ್‌ಹಾಮರ್ (Gerhard Oberhammer) ರವರು ಸ್ವತಃ ಕ್ರೈಸ್ತ ಧರ್ಮೀಯರಾದರೂ ಭಾರತೀಯ ದರ್ಶನಶಾಸ್ತ್ರವನ್ನು ಚೆನ್ನಾಗಿ ಬಲ್ಲವರು. ಅದರಲ್ಲೂ ವಿಶೇಷವಾಗಿ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತವನ್ನು ಆಳವಾಗಿ ಅಧ್ಯಯನ ಮಾಡಿ ಅನೇಕ ಸಂಶೋಧನಾ ಗ್ರಂಥಗಳನ್ನು ಮತ್ತು ಲೇಖನಗಳನ್ನು ಜರ್ಮನ್ ಭಾಷೆಯಲ್ಲಿ ಬರೆದಿದ್ದಾರೆ. ಅವರು ಎರಡು ವಾರಗಳಿಗೊಮ್ಮೆ ನಮ್ಮನ್ನು ತಮ್ಮ ಮನೆಗೆ ಸಂಜೆಯ ಔತಣಕೂಟಕ್ಕೆ ಕರೆಸಿಕೊಳ್ಳುತ್ತಿದ್ದರು. ಮನೆಯೊಳಗೆ ಕಾಲಿಡುತ್ತಿದ್ದಂತೆಯೇ ಅವರ ಶ್ರೀಮತಿಯವರು "Kommen Sie Herr Dr Shivamurthy" ಎಂದು ಆತ್ಮೀಯತೆಯಿಂದ ಬರಮಾಡಿಕೊಂಡು ಉಭಯಕುಶಲೋಪರಿಯ ನಂತರ ಊಣಬಡಿಸುತ್ತಿದ್ದರು. ಆರಂಭದ ಕೆಲವು ದಿನಗಳಲ್ಲಿ ನಮ್ಮಿಂದ ಸರಳವಾದ ಸಸ್ಯಾಹಾರದ ಭಕ್ಷ್ಯಭೋಜ್ಯಗಳನ್ನು ಮಾಡುವುದು ಹೇಗೆಂದು ತಿಳಿದುಕೊಂಡು ನಾವು ಹೋದಾಗ ಸಸ್ಯಾಹಾರದ ಅಡುಗೆಯನ್ನೇ ಕಷ್ಟಪಟ್ಟು ಮಾಡಿ ಬಡಿಸುತ್ತಿದ್ದರು. ಸಂಜೆ 7 ಗಂಟೆ ಹೊತ್ತಿಗೆಲ್ಲಾ ಭೋಜನ ಮುಗಿದು ಪ್ರೊಫೆಸರ್ ಓಬರ್‌ಹಾಮರ್ ಮತ್ತು ನಮ್ಮ ಮಧ್ಯೆ ರಾತ್ರಿ 10-11 ಗಂಟೆವರೆಗೂ ಸಂಶೋಧನಾವಿಷಯವಾಗಿ ಸಂಭಾಷಣೆ ನಡೆಯುತ್ತಿತ್ತು.

ಈ ವಿಷಯವಾಗಿ ಹಿಂದೆ ವಿವರವಾಗಿ ಬರೆದ ನೆನಪು. ಈಗ ಪುನಃ ಬರೆಯಲು ಕಾರಣ ವಿಯೆನ್ನಾದಿಂದ ಹಿಂದಿರುಗಿದ ಮೇಲೆ ಮತ್ತೆ ಅವರನ್ನು ನೋಡಲು ಆಗಲೇ ಇಲ್ಲ. ನೋಡುವ ಸಂದರ್ಭ ಕೂಡಿಬರಲಿಲ್ಲ ಎನ್ನುವುದಕ್ಕಿಂತ ನೋಡುವ ಪ್ರಯತ್ನ ಮಾಡಲಿಲ್ಲ ಎನ್ನುವುದು ಹೆಚ್ಚು ಉಚಿತ. ಅದಕ್ಕಾಗಿ ಬಹಳಷ್ಟು ವಿಷಾದವೂ ಉಂಟಾಯಿತು. ಎರಡು ವರ್ಷಗಳ ಹಿಂದೆ ವಿಶೇಷ ಉಪನ್ಯಾಸ ನೀಡಲು ಫ್ರಾನ್ಸ್ ದೇಶಕ್ಕೆ ಹೋದಾಗ ಪ್ರಾಸಂಗಿಕವಾಗಿ ಪ್ರೊಫೆಸರ್ ಓಬರ್‌ಹಾಮರ್‌ರವರಿಗೆ ಫೋನ್ ಮಾಡಿ ಕ್ಷೇಮಸಮಾಚಾರ ವಿಚಾರಿಸಿದಾಗ ಅವರ ಧರ್ಮಪತ್ನಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ಮರಣಹೊಂದಿದ್ದಾರೆಂಬ ದಾರುಣ ಸಂಗತಿ ಕಾದಿತ್ತು. ಅವರ ಮನೆಯಲ್ಲಿ ಆಚರಿಸಿದ ಕ್ರಿಸ್‌ಮಸ್ ಹಬ್ಬದ ಸಡಗರದ ಸವಿನೆನಪುಗಳ ಜೊತೆಗೆ ಅಕ್ಕಮಹಾದೇವಿಯ ವಚನ **"ಆಯುಷ್ಯ ಹೋಗುತ್ತಿದೆ, ಭವಿಷ್ಯ ತೊಲಗುತ್ತಿದೆ, ಕೂಡಿರ್ದ ಸತಿ-ಸುತರು ತಮ ತಮಗೆ ಹರಿದು ಹೋಗುತ್ತೈದಾರೆ"** ನೆನಪಾಯಿತು: ನಮ್ಮ ವ್ಯಕ್ತಿತ್ವದ ವಿಕಸನದಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿದ್ದ ಪ್ರೊಫೆಸರ್ ಓಬರ್‌ಹಾಮರ್‌ರವರನ್ನು ಭೇಟಿ ಮಾಡಿ ಅವರು ಬದುಕಿದ್ದಾಗಲೇ ನಮ್ಮ ಗೌರವವನ್ನು ಸಲ್ಲಿಸಬೇಕೆಂಬ ದೃಢನಿರ್ಧಾರ ಮಾಡಿದೆವು. ಕಳೆದ ಜುಲೈ ತಿಂಗಳ ಕೊನೆಯ ವಾರ ಅವರನ್ನು ನೋಡಲು ಅವರು ತಮ್ಮ ನಿವೃತ್ತಜೀವನವನ್ನು ಸಾಗಿಸುತ್ತಿದ್ದ ಆಸ್ಟ್ರಿಯಾ ದೇಶದ ಇನ್ಸ್‌ಬ್ರುಕ್ (Innsbruck) ನಗರಕ್ಕೆ ಹೋದೆವು. ಯೂರೋಪಿನ ಮಧ್ಯಭಾಗದಲ್ಲಿರುವ ಈ ನಗರ ಗಗನಚುಂಬಿ 'ಆಲ್ಪ್ಸ್' (Alps) ಪರ್ವತಶ್ರೇಣಿಯಿಂದ ಸುತ್ತುವರಿದು ಕಣ್ಮನ ತಣಿಸುವ ನಿಸರ್ಗದ ಸೊಬಗಿನಿಂದ ಕೂಡಿದೆ. ಚಳಿಗಾಲದ ರಜಾಕಾಲದಲ್ಲಿ ವಿಹಾರಾರ್ಥವಾಗಿ ಸಹಸ್ರಾರು ಜನರು ತಮ್ಮ ಕುಟುಂಬಪರಿವಾರದೊಂದಿಗೆ ಇಲ್ಲಿಗೆ ಬರುತ್ತಾರೆ. ಮೈತುಂಬಾ ಉಣ್ಣೆಯ ಬಟ್ಟೆಯನ್ನು ಧರಿಸಿ ಕಾಲಲ್ಲಿ ಉದ್ದನೆಯ ಮರದ ಪಟ್ಟಿಗಳನ್ನು ಕಟ್ಟಿಕೊಂಡು ಕೈಯಲ್ಲಿ ಕೋಲುಗಳನ್ನು ಹಿಡಿದು ಮೀಟುತ್ತಾ ದಟ್ಟವಾದ ಮಂಜುಗಡ್ಡೆಗಳಿಂದ ಕೂಡಿದ ತಪ್ಪಲಿನ ಇಳಿಜಾರಿನಲ್ಲಿ ಜಾರುವ ಆಟ (skiing) ಆಡಿ ಖುಷಿಪಡುತ್ತಾರೆ. ಸುತ್ತಲೂ ಕಣ್ಣುಹಾಯಿಸಿದಾಗ ಇಡೀ ನಗರವೇ ಪ್ರಾಕೃತಿಕ ಸೊಬಗಿನಿಂದ ಕೂಡಿದ ಒಂದು ದೊಡ್ಡ ಕ್ರೀಡಾಂಗಣದಂತೆ ಕಂಗೊಳಿಸುತ್ತಿತ್ತು. ಹತ್ತಿರದಲ್ಲಿಯೇ ಇದ್ದ ವಿಮಾನನಿಲ್ದಾಣದಿಂದ ಮೇಲೇರುತ್ತಿದ್ದ ವಿಮಾನಗಳು ಪೈಪೋಟಿಯಿಂದ ಪರ್ವತಾರೋಹಣವನ್ನು ಮಾಡುತ್ತಿದ್ದಂತೆ ತೋರುತ್ತಿದ್ದವು. ಪಕ್ಕದಲ್ಲಿ ತುಂಬಿ ಹರಿಯುತ್ತಿದ್ದ ಪ್ರಸಿದ್ಧ ಡೋನಾವ್ (Donau) ನದಿಯ ಉಪನದಿಯಾದ 'ಇನ್' (Inn) ಸ್ವತಃ ಒಲಂಪಿಕ್ಸ್ ಕ್ರೀಡಾಪಟುವಿನಂತೆ ಓಡುತ್ತಿರುವಂತೆ ಕಾಣಿಸಿತು. ನದೀ ತೀರದ ಮನೆಯಲ್ಲಿ ಪ್ರೊಫೆಸರ್ ಓಬರ್‌ಹಾಮರ್ ಏಕಾಂಗಿಯಾಗಿ ಒಬ್ಬರೇ ಇದ್ದರು. ಮುಪ್ಪು ಆವರಿಸಿದ್ದರೂ ಶರೀರ ಅಷ್ಟಾಗಿ ಕೃಶವಾಗಿರಲಿಲ್ಲ. ಜೀವನೋತ್ಸಾಹ ಕುಗ್ಗಿರಲಿಲ್ಲ. ಅಧ್ಯಾಪನವೃತ್ತಿಯಿಂದ ನಿವೃತ್ತರಾಗಿದ್ದರೂ 'ಸ್ವಾಧ್ಯಾಯಾನ್ ಮಾ ಪ್ರಮದಃ' ಎಂಬ ತೈತ್ತಿರೀಯೋಪನಿಷತ್ತಿನ ಆಶಯದಂತೆ ನಿರಂತರ ಅಧ್ಯಯನಶೀಲರಾಗಿದ್ದರು. ಮನೆ ಮೇಲ್ನೋಟಕ್ಕೆ ಬರಿದಾಗಿತ್ತು. ಆದರೂ ಅವರು ಸ್ವಾಧ್ಯಾಯಕ್ಕೆಂದು ತಮ್ಮ ಅಧ್ಯಯನದ ಕೊಠಡಿಯ ಸುತ್ತ

ಕಪಾಟುಗಳಲ್ಲಿ ಇಟ್ಟುಕೊಂಡಿದ್ದ ಸಾವಿರಾರು ಪುಸ್ತಕಗಳನ್ನು ನೋಡಿದಾಗ ಮನೆಯ ಹೊರಗೆ 'ಇನ್' ನದಿ ಹರಿದಂತೆ ಮನೆಯೊಳಗೆ ಸಂಸ್ಕೃತಸಾಹಿತ್ಯರಸಗಂಗೆ ತುಂಬಿ ಹರಿಯುತ್ತಿರುವಂತೆ ತೋರಿತು. ಉಭಯಕುಶಲೋಪರಿಯ ನಂತರ ಅವರಿಗೆ ಶಾಲು ಹೊದಿಸಿ ಗೌರವಿಸಿದ್ದಕ್ಕೆ ಸಂತೋಷ ವ್ಯಕ್ತಪಡಿಸಿ ಏನನ್ನೋ ನೆನೆಸಿಕೊಂಡು ಒಳಗೆ ಹೋದವರು ಒಂದೆರಡು ನಿಮಿಷಗಳಲ್ಲಿಯೇ ಹಳೆಯ ಶಾಲೊಂದನ್ನು ಕೈಯಲ್ಲಿ ತೆಗೆದುಕೊಂಡು ಬಂದರು. ಅದು ಮೂರು ದಶಕಗಳ ಹಿಂದೆ ನಾವು ವಿದ್ಯಾರ್ಥಿಗಳಾಗಿದ್ದಾಗ ಅವರಿಗೆ ಉಡುಗೊರೆಯಾಗಿ ಕೊಟ್ಟಿದ್ದ ಕಾಶ್ಮೀರದ ಶಾಲು! ಅದನ್ನು ಜತನದಿಂದ ಕಾಪಾಡಿಕೊಂಡು ಬಂದಿದ್ದರು. ಅದನ್ನು ನೋಡಿ ನಮ್ಮ ಹೃದಯದಲ್ಲಿ ಮಧುರ ಭಾವನೆಗಳ ಮಹಾಪೂರ ಉಕ್ಕಿ ಹರಿದಿತ್ತು! ನಂತರ ಹತ್ತಿರದ ಚರ್ಚ್ ಆವರಣದಲ್ಲಿದ್ದ ಅವರ ಧರ್ಮಪತ್ನಿಯ ಸಮಾಧಿ ಸ್ಥಳಕ್ಕೆ ಹೋದಾಗ ಮೌನ ಆವರಿಸಿತ್ತು! ದಿಢೀರನೆ ಬಾರಿಸಿದ ಚರ್ಚ್ ಗಂಟೆ ಕಾಲದ ಕರೆಯ ದ್ಯೋತಕವಾಗಿ ರಿಂಗಣಿಸಿತ್ತು! ಸಂಜೆ ವೇಳೆಗೆ ಅವರ ಏಕಮಾತ್ರ ಪುತ್ರಿ ಡಾ. ಮರಿಯಾ ಬಾರ್ಬರಾ (Maria Barbara) ಮನೆಗೆ ಬಂದಳು. ವೃತ್ತಿಯಲ್ಲಿ ವೈದ್ಯಳಾಗಿ ಬೆಳೆದು ನಿಂತ ಅವಳನ್ನು ತಕ್ಷಣವೇ ಗುರುತಿಸಲು ಆಗಲಿಲ್ಲ. ಮಧ್ಯೆ ಒಂದೆರಡು ಬಾರಿ ದೂರವಾಣಿಯಲ್ಲಿ ಮಾತನಾಡಿದ್ದು ಆಕೆಯ ಧ್ವನಿ ಮಾತ್ರ ಪರಿಚಿತವಿತ್ತು. ಮೂರ್ನಾಲ್ಕು ವರ್ಷ ವಯಸ್ಸಿನ ಪುಟ್ಟ ಬಾಲಕಿಯಾಗಿದ್ದಾಗ ಅವಳನ್ನು ನೋಡಿದ್ದು. ಡಾ. ಮರಿಯಾ ಅಡುಗೆಮನೆ ಮತ್ತು ಡೈನಿಂಗ್ ಹಾಲ್ ಮಧ್ಯೆ ಜಿಂಕೆಯಂತೆ ಓಡಾಡಿ ಸಂಜೆಯ ಔತಣಕ್ಕೆ ಸಿದ್ಧತೆ ಮಾಡತೊಡಗಿದಳು. ನಾವು ಜೊತೆಯಲ್ಲಿ ತಂದಿದ್ದ ಎಂ.ಟಿ.ಆರ್ 'ಪುಳಿಯೋಗರೆ' ಪ್ಯಾಕೆಟ್‌ಗಳನ್ನು ಬಿಚ್ಚಿ ಅದರಲ್ಲಿ ಆಂಗ್ಲಭಾಷೆಯಲ್ಲಿದ್ದ ಸೂಚನೆಗಳಿಗೆ ಜರ್ಮನ್‌ನಲ್ಲಿ ವಿವರಣೆ ಪಡೆದು ಆರೋಗಣೆಗೆ ಸಿದ್ಧಪಡಿಸತೊಡಗಿದಳು.

ನಮ್ಮ ಪಕ್ಕದಲ್ಲಿ ಎತ್ತರದ ಕುರ್ಚಿಯಲ್ಲಿ ಕುಳಿತುಕೊಂಡು ಕೊರಳಲ್ಲಿ 'ಬಿಬ್' (bib) ಕಟ್ಟಿಕೊಂಡು ನಮ್ಮೊಂದಿಗೆ ಹರಟುತ್ತಾ ಡೈನಿಂಗ್ ಟೇಬಲ್ ಮೇಲೆ ಜೊತೆಗೂಡಿ ಊಟಮಾಡುತ್ತಿದ್ದ ಪುಟ್ಟ ಹುಡುಗಿ, ನಮ್ಮ ಕೈಹಿಡಿದು ಜಗ್ಗಿ ಪುಟ್ಟ ಪುಟ್ಟ ಹೆಜ್ಜೆಗಳನ್ನಿಟ್ಟು ತನ್ನ ಆಟದ ಕೋಣೆಗೆ ನಮ್ಮನ್ನು ಕರೆದುಕೊಂಡು ಹೋಗಿ ತನ್ನ ಬೊಂಬೆಗಳನ್ನು ತೋರಿಸುತ್ತಿದ್ದ ಪುಟ್ಟ ಹುಡುಗಿ ಈಕೇನೇ ಎಂದು ದಿಟ್ಟಿಸಿ ನೋಡತೊಡಗಿದೆವು. ಆಕೆಯ ಬಾಲ್ಯದಲ್ಲಿ ತೆಗಿದಿದ್ದ ಭಾವಚಿತ್ರವನ್ನು ಅವಳ ಕೈಗಿತ್ತು ಮಾತನಾಡಿಸುವಾಗ ನಮ್ಮೊಳಗೊಬ್ಬ ರವೀಂದ್ರನಾಥ್ ಟಾಗೂರ್‌ರವರ ಲೇಖನಿಯಿಂದ ಮೂಡಿಬಂದ 'ಕಾಬೂಲಿವಾಲಾ' ಇದ್ದಂತೆ ಭಾಸವಾಯಿತು!

23.12.2009

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑